ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

8

ಇಲಾಖೆ / ವಿಷಯ : DEPARTMENT / SUBJECT: ಎಸಿಬಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 10/11/20

# ಎಸಿಬಿ ಮುಂದೆ ಹಾಜರಾದ ಸುಧಾ

10/11/20

## ಆದಾಯ ಮೀರಿ ಆಸ್ತಿ ಗಳಿಕೆ: ಮಾಹಿತಿ ಕೇಳಿದ ಎಸಿಬಿ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಗುರಿಯಾಗಿರುವ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಆಡಳಿತಾಧಿಕಾರಿ ಡಾ.ಸುಧಾ, ಸೋಮವಾರ ಎಸಿಬಿ ಅಧಿಕಾರಿಗಳ ಮುಂದೆ ಹಾಜರಾಗಿದ್ದರು.

ಸುಧಾ ಅವರ ನಿವಾಸ, ಅವರ ಆಪ್ತರು ಸಂಬಂಧಿಕರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆಯನ್ನು ಎಸಿಬಿ ಪೂರ್ಣಗೊಳಿಸಿತ್ತು. ದಾಳಿಯಲ್ಲಿ ಸಿಕ್ಕಿರುವ ಆಸ್ತಿ ದಾಖಲೆಗಳು, ಚಿನ್ನಾಭರಣ ಸೇರಿ ಕೆಲವು ವಸ್ತುಗಳನ್ನು ಮುಂದಿಟ್ಟುಕೊಂಡು ತನಿಖೆ ಚುರುಕುಗೊಳಿಸಿರುವ ಎಸಿಬಿ ಅಧಿಕಾರಿಗಳು, ಕೆಲವು ಮಾಹಿತಿ ಕೋರಿ ಕಚೇರಿಗೆ ಆಗಮಿಸುವಂತೆ ಸುಧಾ ಅವರಿಗೆ ಸೂಚನೆ ನೀಡಿದ್ದರು.



■ ದಾಳಿಯಲ್ಲಿ ಕೋಟ್ಯಂತರ ರೂ. ಮೌಲ್ಯದ ಆಸ್ತಿ ದಾಖಲೆ ಪತ್ತೆ

ಸೋಮವಾರ ಸುಧಾ ಅವರು ಎಸಿಬಿಯ ತನಿಖಾಧಿಕಾರಿ ಮುಂದೆ ಹಾಜರಾಗಿದ್ದರು. ಈ ವೇಳೆ ದಾಳಿಯಲ್ಲಿ ದೊರೆತಿರುವ ದಾಖಲೆಗಳು ಹಾಗೂ ವಸ್ತುಗಳನ್ನು ಮುಂದಿಟ್ಟುಕೊಂಡು, ಅವರ ಆದಾಯ, ಖರ್ಚು ವೆಚ್ಚಗಳ ವಿವರ, ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾಹಿತಿ ಒದಗಿಸುವಂತೆ ಹೇಳಿ ಕಳುಹಿಸಲಾಗಿದೆ ಎಂದು ಎಸಿಬಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಡಾ. ಸುಧಾ ಹಾಗೂ ಅವರ ಆಪ್ತರ ಮೇಲೆ ನಡೆದ ದಾಳಿಯಲ್ಲಿ ಕೋಟ್ಯಂತರ ರೂ. ಮೌಲ್ಯದ ಸ್ಥಿರಾಸ್ತಿ( ಜಮೀನು) ದಾಖಲೆಗಳು ಪತ್ತೆಯಾಗಿವೆ. ಮೈಸೂರು, ಬೆಂಗಳೂರು, ಉಡುಪಿಯ ಏಳು ಕಡೆ ನಡೆಸಲಾದ ದಾಳಿಯಲ್ಲಿ ಸಿಕ್ಕ ವಸ್ತುಗಳ ಮಾಹಿತಿಯನ್ನು ಎಸಿಬಿ ಬಹಿರಂಗಪಡಿಸಿದೆ. ಬೆಂಗಳೂರು ಸೇರಿದಂತೆ ವಿವಿಧ ಕಡೆ 200ಕ್ಕೂ ಹೆಚ್ಚು ಸ್ಥಿರಾಸ್ತಿಗಳ (ಭೂಮಿ) ದಾಖಲೆಗಳು, 50 ಬ್ಯಾಂಕ್ ಖಾತೆಗಳು, 50 ಬ್ಯಾಂಕ್ ಚೆಕ್ ಗಳು, ಅವರ ಆಪ್ತೆ ರೇಣುಕಾ ಹಾಗೂ ಅವರ ಮನೆಯಲ್ಲಿ 3.7 ಏಳು ಕೆ.ಜಿ. ಚಿನ್ನಾಭರಣ ಹಾಗೂ 10 .5 ಕೆ.ಜಿ ಬೆಳ್ಳಿ ವಸ್ತುಗಳು , 36.86 ಲಕ್ಷ ರೂ. ನಗದು ಜಪ್ತಿ ಮಾಡಲಾಗಿದೆ.

ದಾಳಿಯಲ್ಲಿ ದೊರೆತ ದಾಖಲೆಗಳ ಪರಿಶೀಲನೆ ಕಾರ್ಯ ನಡೆಸಲಾಗುತ್ತಿದೆ. ಅವರು ಸಲ್ಲಿಸುವ ಆದಾಯ ದಾಖಲೆಗಳ ಜತೆ ಸಿಕ್ಕಿರುವ ದಾಖಲೆಗಳನ್ನು ಸಮೀಕರಿಸಲಾಗುತ್ತದೆ. ಬಳಿಕ ಅಕ್ರಮ ಆಸ್ತಿ ಗಳಿಕೆ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.